## ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

**ಸಿ.ಸಿ. ನಂ: 1685/2021**

| | | | |
|---|---|---|---|
| ಸಾಕ್ಷಿಯ ಹೆಸರು | : ರವಿಕುಮಾರ್ ಎ ಆರ್ | ಸಿ.ಡಬ್ಲ್ಯೂ | : 05 |
| ತಂದೆ ಹೆಸರು | : ರಾಜೇಗೌಡ | ಪಿ.ಡಬ್ಲ್ಯೂ | : 04 |
| ವಯಸ್ಸು | : 28 ವರ್ಷ | ಪ್ರಮಾಣೀಕರಿಸಿದ ದಿ: | 10.07.2026. |
| ವೃತ್ತಿ | : ಖಾಸಗಿ | | |
| ವಾಸ | : ಎಸ್ ಅಂಕನಹಳ್ಳಿ | | |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ:- ಮಾನ್ಯ ಎ.ಪಿ.ಪಿ.ಯವರಿಂದ:

ದಿನಾಂಕ 03.07.2021 ರಂದು ಚಾ ಸಾ 3 ರವರು ಮಳೆ ಬಂದಿದ್ದ ನೀರನ್ನು ಮದ್ಯಾಹ್ನ 3.00 ರ ಸುಮಾರಿಗೆ ರಸ್ತೆಗೆ ಚೆಲ್ಲುತ್ತಿದ್ದಾಗ ಒಂದನೇ ಆರೋಪಿ ನನ್ನ ತಂದೆಯೊಂದಿಗೆ ಗಲಾಟೆ ಮಾಡಿದ್ದು ನಾವು ಅವರನ್ನು ಸಮಾಧಾನ ಮಾಡಿದ್ದೇವು. ಅದೇ ದಿನಾ ರಾತ್ರಿ 8.15 ಕ್ಕೆ ಒಂದು ಮತ್ತು ಎರಡನೇ ಆರೋಪಿಗಳು ಮದ್ಯಪಾನ ಮಾಡಿ ಬಂದು ನಮ್ಮೊಂದಿಗೆ ಜಗಳ ಮಾಡಿತ್ತಿದ್ದರು ನಾನು ಆಗ 112 ಗೆ ಕರೆ ಮಾಡಿರುತ್ತೇನೆ. ಆಗ ಪೊಲೀಸರು ಬಂದು ನಮ್ಮನ್ನು ಗಲಾಟೆಗೆ ಬಗ್ಗೆ ವಿಚಾರಿಸುತ್ತಿದ್ದಾಗ ಒಂದು ಮತ್ತು ಎರಡನೇ ಆರೋಪಿಗಳು ಪೊಲೀಸರ ಕುತ್ತಿಗೆ ಪಟ್ಟಿ ಹಿಡಿದು ನೀವು ಪೊಲೀಸರಾದರೆ ನಮಗೇನು ಒದ್ದು ಕೆಡವಿದರು. ಆರೋಪಿಗಳು ಪೊಲೀಸರಿಗೆ ಇನ್ನೊಮ್ಮೆ ನಮ್ಮ ತಂಟೆಗೆ ಬಂದರೆ ಹೊಡೆದು ಹೂತು ಹಾಕುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿದರು. ಪೊಲೀಸರು ಆಗ ಸಮವಸ್ತ್ರದಲ್ಲಿದ್ದರು. ಆರೋಪಿಗಳ ಗೈರು ಹಾಜರಾತಿ ಅರ್ಜಿ ಸಲ್ಲಿಸಿದ್ದು ಅರೋಪಿಗಳ ಗುರುತಿಗೆ ವಕೀಲರಿಂದ ತಕರಾರು ಇರುವುದಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿ ಮು ಮಾ 1 ಮತ್ತು 2 ನ್ನು ನೋಡಿ ಸದರಿ ಸಮವಸ್ತ್ರವೇ ಪೊಲೀಸರು ಧರಿಸಿದ್ದ ಸಮವಸ್ತ್ರಗಳು ಎಂದು ಗುರುತಿಸಿರುತ್ತಾರೆ.

(ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಭಾಗಶ: ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಕಲಂ 161 ಹೇಳಿಕೆಯನ್ನು ಪರಿಶಿಲೀಸಿ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲು: - ಮಾನ್ಯ ಎ.ಪಿ.ಪಿ. ರವರಿಂದ:

ಒಂದು ಮತ್ತು ಎರಡನೇ ಆರೋಪಿಗಳು ಸಮವಸ್ತ್ರದಲ್ಲಿದ್ದ ಪೊಲೀಸರಿಗೆ ಏನು ಬೋಳಿ ಮಕ್ಕಳೇ ಎಂದು ಹೇಳಿ ಅವರ ಕರ್ತವ್ಯಕ್ಕೆ ಅಡ್ಡಿ ಪಡಿಸಿದರು ಎಂದರೆ ಸರಿ. ಒಂದು ಮತ್ತು ಎರಡನೇ ಆರೋಪಿಗಳು ಪೊಲೀಸರಿಗೆ ಇನ್ನೊಮ್ಮೆ ಅವರ ಊರಿಗೆ ಕಾಲಿಟ್ಟರೆ ಅವರನ್ನು ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿ.

ಪಾಟೀ ಸವಾಲು: - ಆರೋಪಿಗಳ ಪರ ಶ್ರೀ ಹೆಚ್ ಆರ್ ಜೆ ವಕೀಲರಿಂದ:

ಆರೋಪಿಗಳು ನನ್ನ ದೊಡ್ಡಪ್ಪನ ಮಕ್ಕಳು ಎಂದರೆ ಸರಿ. ನನ್ನ ಮತ್ತು ಆರೋಪಿಗಳ ಮನೆ ಅಕ್ಕ ಪಕ್ಕದಲ್ಲಿವೆ ಎಂದರೆ ಸರಿ. ನಮ್ಮ ಮತ್ತು ಆರೋಪಿಗಳ ನಡುವೆ ಜಮೀನಿನ ವಿಚಾರವಾಗಿ ಆಗಾಗ ಸಣ್ಣ ಪುಟ್ಟ ಗಲಾಟೆ ನಡೆಯುತ್ತವೆ ಎಂದರೆ ಸರಿ. ನಮ್ಮ ನಡುವೆ ಜಮೀನಿನ ಹಿಸ್ಸೆಯು ಸರಿಯಾಗಿ ಆಗಿರುವುದಿಲ್ಲ ಎಂದು ಈ ಹಿಂದೆ ಗಲಾಟೆ ನಡೆದಿದೆ ಎಂದರೆ ಸರಿ. ಈ ಗಲಾಟೆ ನಡೆದ ದಿನಾ ನಮ್ಮ ಊರಿನಲ್ಲಿ ಪಿತೃಪಕ್ಷ ಹಬ್ಬ ಇತ್ತು ಎಂದರೆ ಸರಿಯಲ್ಲ. ಚಾ ಸಾ 1 ರವರು ನನಗೆ ಪರಿಚಯಸ್ಥರು ಎಂದರೆ ಸರಿಯಲ್ಲ. ಅವರು ಸಂಬಂಧಿಕರಾದ ಕಾರಣ ನಮ್ಮ ಮನೆ ಗೆ ಊಟಕ್ಕೆಂದು ಹೋಗಿ ಬಂದು ಮಾಡುತ್ತಿದ್ದರು ಎಂದರೆ ಸರಿಯಲ್ಲ.

2. ಗಲಾಟೆ ಮದ್ಯಾಹ್ನ 3.00 ಗಂಟೆ ಸುಮಾರಿಗೆ ನಡೆದಿರುತ್ತದೆ. ಗಲಾಟೆ ಎಷ್ಟು ಸಮಯ ನಡೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ದೂರು ನೀಡಲು ಅಥವಾ 112 ಗೆ ಕರೆ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಗಲಾಟೆ ನಡೆದ ಜಾಗದಲ್ಲಿ ಬೀದಿ ದೀಪ ಇರಲಿಲ್ಲ. ಆರೋಪಿ ಮನೆಗೆ ಮತ್ತು ನಮ್ಮ ಮನೆಗೆ 10 ಅಡಿಗಳ ಅಂತರವಿದೆ. ಗಲಾಟೆ ಸಮಯದಲ್ಲಿ ಕತ್ತಲಿದ್ದರಿಂದ ನಾನು ಗಲಾಟೆಯನ್ನು ಕಣ್ಣಾರೆ ನೋಡಿಲ್ಲ ಎಂದರೆ ಸರಿಯಲ್ಲ. 112 ಕರೆ ಮಾಡಿದ ನಂತರ ಸ್ಥಳಕ್ಕೆ ಬಂದ ಪೊಲೀಸರಲ್ಲಿ ಮೊದಲು ಗಾಡಿಯಿಂದ ಚಾಲಕ ಇಳಿದಿರಾ ಅಥವಾ ಪೊಲೀಸರು ಇಳಿದಿದ್ದರಾ ಎಂದು ನನಗೆ ಗೊತ್ತಿಲ್ಲ. ಗಲಾಟೆಯಲ್ಲಿ ಚಾ ಸಾ 1 ರವರ ಕೊರಳ ಪಟ್ಟಿ ಹಿಡಿದು ಎಳೆದಿದ್ದರು. ಚಾ ಸಾ 1 ರವರೊಂದಿಗೆ ಇದ್ದ ಚಾಲಕರ ಹೆಸರು ನನಗೆ ಗೊತ್ತಿಲ್ಲ. ಚಾಲಕ ಮತ್ತು ಚಾ ಸಾ 1 ಇಬ್ಬರೂ ಸಮವಸ್ತ್ರದಲ್ಲಿದ್ದರು. ಚಾಲಕರ ಮೇಲೆ ಗಲಾಟೆ ಮಾಡಿದ್ದನ್ನು ನಾನು ನೋಡಿಲ್ಲ. ನಾನು ಗಲಾಟೆಗೆ ಸಂಬಂಧಿಸಿದಂತೆ ಠಾಣೆಯಲ್ಲಿ ಹೇಳಿಕೆ ನೀಡಿಲ್ಲ. ನಾನು ಸಾಕ್ಷಿಗೆಂದು ದಿನಾಂಕ 24.07.2021 ರಂದು ಠಾಣೆಯಲ್ಲಿ ಹೇಳಿಕೆ ನೀಡಿದ್ದೇನೆ. ನನ್ನ ಹೇಳಿಕೆಯನ್ನು ದಾಖಲಿಸಿಕೊಂಡು ಪೊಲೀಸ್ ಯಾರೆಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಸಾಕ್ಷಿ ಹೇಳಿದ್ದನ್ನು ಹೊರತುಪಡಿಸಿ ಬೇರೆಯಾವುದೇ ಬರವಣಿಗೆಯನ್ನು ನನ್ನ ಮುಂದೆ ಪೊಲೀಸರು ಮಾಡಿಲ್ಲ.

2. ಆರೋಪಿಗಳು ಗಲಾಟೆ ದಿನಾ ಯಾವುದೇ ಗಲಾಟೆ ಮಾಡಿಲ್ಲ, ಪೊಲೀಸರೊಂದಿಗೆ ಗಲಾಟೆ ಮಾಡಿಲ್ಲ, ಯಾವುದೇ ಘಟನೆ ನೆಡದಿಲ್ಲ, ಚಾ ಸಾ 1 ನಮ್ಮೊಂದಿಗೆ ಚೆನ್ನಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾ ಸಾ 1 ಮತ್ತು ಚಾಲಕ ಘಟನೆದಿನಾ ನಮ್ಮ ಊರಿಗೆ ನಮ್ಮ ಮನೆಯಲ್ಲಿ ಊಟಕ್ಕೆಂದು ಬಂದಿದ್ದರು ಎಂದರೆ ಸರಿಯಲ್ಲ. ಮು ಮಾ 1 ನ್ನು ಚಾ ಸಾ 1 ರವರು ಆ ದಿನಾ ಧರಿಸಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪೊಲೀಸರು ಠಾಣೆಯಲ್ಲಿ ನನ್ನಿಂದ ಸಾಕ್ಷಿ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿಕೆಗೆ ಸಹಿ ಹಾಕಿದ್ದೇನೆ. ಮು ಮಾ 1 ನ್ನು ಇದೇ ಮೊದಲು ಬಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಎಂದರೆ ಸರಿ.

ಪಾಟೀ ಸವಾಲು ಮುಕ್ತಾಯ:

ಮರು ವಿಚಾರಣೆ ಇಲ್ಲ:

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

1ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,

ಹೊಳೆನರಸೀಪುರ